ಕರಾಸಕೈಅನಿನಿ

ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)

ನೊಂದಾಯಿತ ಕಛೇರಿ: ಆಡಳಿತ ಕಛೇರಿ ಕಟ್ಟಡ, ಕೈಗಾರಿಕಾ ವಸಾಹತು, ರಾಜಾಜಿನಗರ, ಬೆಂಗಳೂರು-560010
ದೂರವಾಣಿ:080-23407011-25 ಇ-ಮೈಲ್:kssidcho@vsnl.com ವೆಬ್‌ಸೈಟ್:www.kssidc.co.in

ಸಂಖ್ಯೆ:ಸಮನ್ವಯ:ಕೈವ:ಸಿಂದಗಿ:ನಿವೇಶನ:ಭೂದರ:ನಿಗದಿ:2016/1502 ದಿನಾಂಕ: 30-07-2016

# ಕಛೇರಿ ಆದೇಶ

ವಿಷಯ: ವಿಜಯಪುರ ಜಿಲ್ಲೆಯ ಸಿಂಧಗಿ ಕೈಗಾರಿಕಾ ವಸಾಹತುವಿನ ನಿವೇಶನ / ಜಮೀನಿನ ದರವನ್ನು ನಿಗದಿಪಡಿಸುವ ಬಗ್ಗೆ.

ಉಲ್ಲೇಖ: 1) ಕಛೇರಿ ಆದೇಶ ಸಂಖ್ಯೆ ಸಮನ್ವಯ:ಜಮೀನಿನ ದರ:ಪರಿಷ್ಕರಣೆ:2012-14/3402 ದಿನಾಂಕ 10.12.2012.

2) ಸ.ಪ್ರವ್ಯ(ಕೈವ), ಬೆಳಗಾವಿ ಇವರ ಹಂಚಿಕೆ ಪತ್ರಿಕಾ ಪ್ರಕಟಣೆ ಸಂಖ್ಯೆ:AGM:NTFN:SHEDS:FLATS:PLOTS:2012-13 ದಿನಾಂಕ 18.03.2013.

3) ಕಛೇರಿ ಆದೇಶ ಸಂಖ್ಯೆ ಸಮನ್ವಯ:ಜಮೀನಿನ ದರ ಪರಿಷ್ಕರಣೆ / 2015-16/849 ದಿನಾಂಕ 11.06.2015

4) ಸಂಬಂಧಪಟ್ಟ ಸಿಂಧಗಿ ಕೈಗಾರಿಕಾ ವಸಾಹತುವಿನ ನಕ್ಷೆ ಹಾಗೂ ಬೆಲೆ ನಿಗದಿ ಕಡತದಲ್ಲಿನ ಮಾನ್ಯ ವ್ಯವಸ್ಥಾಪಕ ನಿರ್ದೇಶಕರವರ ಅನುಮೋದನೆ.

-------

**ಪ್ರಸ್ತಾವನೆ:**

ನಿಗಮದಿಂದ ವಿಜಯಪುರ ಜಿಲ್ಲೆಯಲ್ಲಿನ ಸಿಂಧಗಿ ಕೈಗಾರಿಕಾ ವಸಾಹತು ಸ್ಥಾಪನೆ ಸಲುವಾಗಿ 28.36 ಎಕರೆ ಜಮೀನನ್ನು ಭೂಸ್ವಾಧೀನ ಪಡಿಸಿಕೊಂಡು, 2011-12 ರಲ್ಲಿ ಅವಶ್ಯ ಮೂಲಭೂತ ಸೌಕರ್ಯಗಳನ್ನೊಳಗೊಂಡ ಕೈಗಾರಿಕಾ ವಸಾಹತುವನ್ನು ಸ್ಥಾಪಿಸಲಾಗಿದ್ದು, ಆ ವಸಾಹತುವಿನಲ್ಲಿ ಒಟ್ಟು 100 ಸಂಖ್ಯೆ ವಿವಿಧ ಮಾದರಿಯ ಕೈಗಾರಿಕಾ ನಿವೇಶನಗಳನ್ನು ಅಭಿವೃದಿಪಡಿಸಲಾಗಿದೆ, ಸದರಿ ನಿವೇಶನಗಳನ್ನು ಹೊಸದಾಗಿ ಹಂಚಿಕೆ ಮಾಡಬೇಕಿದ್ದ ಹಿನ್ನೆಲೆಯಲ್ಲಿ, ಉಲ್ಲೇಖ (1) ಹಾಗೂ (3)ರಲ್ಲಿ ಹೊರಡಿಸಲ್ಪಟ್ಟಿರುವ ನಿವೇಶನ / ಜಮೀನಿನ ದರ ಪರಿಷ್ಕರಣೆ ಕಛೇರಿ ಆದೇಶಗಳಲ್ಲಿ ಸದರಿ ಸಿಂಧಗಿ ಕೈಗಾರಿಕಾ ವಸಾಹತುವಿನ ನಿವೇಶನ / ಜಮೀನಿಗೆ ಯಾವುದೇ ಭೂದರವನ್ನು ನಿಗದಿಪಡಿಸಿರುವುದಿಲ್ಲ. ಆದಾಗ್ಯೂ, ನಿಗಮದ ಹೊಸ ಕೈಗಾರಿಕಾ ವಸಾಹತುಗಳ ನಿವೇಶನ/ಜಮೀನಿನ ದರವನ್ನು ನಿಗಮದ ಮಂಡಳಿಯ ಕಾರ್ಯನೀತಿ ನಿರ್ಣಯದನ್ವಯ, ನಿವೇಶನ/ಜಮೀನಿನ ದರವನ್ನು ಲೆಕ್ಕಾಚಾರ ಮಾಡಿ, ನಿಗದಿಪಡಿಸಿದ ನಿವೇಶನ / ಜಮೀನಿನ ಬಗ್ಗೆ ವ್ಯವಸ್ಥಾಪಕ ನಿರ್ದೇಶಕರವರ ಅನುಮೋದನೆಗೆ ಸಲ್ಲಿಸುವಂತೆ ತೀರ್ಮಾನಿಸಲಾಗಿತ್ತು.

ನಿವೇಶನಗಳ ಹಂಚಿಕೆಯಿಂದಾಗಿ, ನಿಗಮಕ್ಕೆ ಸ್ವಲ್ಪಮಟ್ಟಿಗಾದರೂ ಆದಾಯವನ್ನು ಗಳಿಸುವ ಉದ್ದೇಶದಿಂದ ಕೈಗಾರಿಕಾ ವಸಾಹತು ಸಿಂಧಗಿಯಲ್ಲಿನ ನಿವೇಶನಗಳನ್ನು ಅಭಿವೃದ್ದಿಪಡಿಸುವ ಹಂತದಲ್ಲಿಯೇ ಅವುಗಳ ಹಂಚಿಕೆಗಾಗಿ ದಿನಾಂಕ 15.03.2013 ರಂದು ಹಂಚಿಕಾ ಪ್ರಕಟಣೆಯನ್ನು ನೀಡಿ, ಸದರಿ ಕೈಗಾರಿಕಾ ವಸಾಹತುವಿನಲ್ಲಿನ ನಿವೇಶನ / ಜಮೀನಿನ ದರವನ್ನು **ತಾತ್ಕಾಲಿಕವಾಗಿ** ಪ್ರತಿ ಚ.ಮೀ.ಗೆ **ರೂ.900/-** ಗಳೆಂದು ನಮೂದಿಸಲಾಗಿತ್ತು.

ಆದರೆ, ಸದರಿ ಹಂಚಿಕೆ ಪ್ರಕಟಣೆ ವಿರುದ್ಧ ಕೆಲವು ಹಂಚಿಕೆದಾರರುಗಳು ಕಲಬುರಗಿ ಉಚ್ಛ ನ್ಯಾಯಾಲಯದ ಸಂಚಾರಿ ಪೀಠದಲ್ಲಿ ದಾವೆ ಹೂಡಿ, ಹಂಚಿಕೆಗೆ ತಡೆಯಾಜ್ಞೆ ತಂದ ಫಲಿತಾಂಶವಾಗಿ ಹಾಗೂ ತನ್ಮಧ್ಯೆ ಫೆಬ್ರವರಿ – 2014 ರಿಂದ ಜೂನ್-2014ರವರೆಗೆ **ಸಾರ್ವತ್ರಿಕ ಚುನಾವಣೆ**ಯಿಂದಾಗಿ ಹಂಚಿಕೆ ಪ್ರಕ್ರಿಯೆಯಲ್ಲಿ ವಿಳಂಬ ಉಂಟಾಗಿತ್ತು.

ಪ್ರಸ್ತುತ, ಕೈಗಾರಿಕಾ ವಸಾಹತು, ಸಿಂಧಗಿಯಲ್ಲಿ ಈಗಾಗಲೇ ಮಾರಾಟ ಕ್ಷೇತ್ರವು 44331.00 ಚದರ ಮೀಟರ್‌ಗಳೆಂದು ಪರಿಗಣಿಸಿ, ಹಂಚಿಕಾ ಪ್ರಕಟಣೆಯಲ್ಲಿ ನಮೂದಿಸಲಾಗಿದ್ದ ತಾತ್ಕಾಲಿಕ ದರ ರೂ.900/- ರಂತೆ ಉದ್ದಿಮೆದಾರರುಗಳಿಗೆ ಈಗಾಗಲೇ ಕೈಗಾರಿಕಾ ನಿವೇಶನಗಳನ್ನು ಹಂಚಿಕೆ ಮಾಡಲಾಗಿದ್ದು, ನಿಗದಿಪಡಿಸಿರುವ ನಿವೇಶನ / ಜಮೀನಿನ ದರದ ಬಗ್ಗೆ ಉದ್ದಿಮೆದಾರರುಗಳಿಂದ ಯಾವುದೇ ರೀತಿಯ ತಕರಾರು ಸ್ವೀಕೃತಗೊಳ್ಳದೇ ಇರುವ ಕಾರಣ, ಕೈಗಾರಿಕಾ ವಸಾಹತು, ಸಿಂಧಗಿಯ ಸುತ್ತಮುತ್ತಲಿನ ಭೂಮಿಯ ಮಾರ್ಗಸೂಚಿ ದರವನ್ನು ಗಮನದಲ್ಲಿಟ್ಟುಕೊಂಡು ತಾತ್ಕಾಲಿಕ ಬೆಲೆಯಾದ ರೂ.900.00 ಗಳನ್ನು ಖಚಿತ ದರವಾಗಿ ನಿಗದಿಪಡಿಸುವುದು ಸೂಕ್ತವೆಂದು ಅಭಿಪ್ರಾಯಿಸಿ, ಉಪ ಪ್ರಧಾನ ವ್ಯವಸ್ಥಾಪಕರು(ಕೈವ), ಹುಬ್ಬಳ್ಳಿ ಹಾಗೂ ಸಹಾಯಕ ಪ್ರಧಾನ ವ್ಯವಸ್ಥಾಪಕರು, ಬೆಳಗಾವಿ ಇವರು, ಕೈಗಾರಿಕಾ ವಸಾಹತು, ಸಿಂಧಗಿಯಲ್ಲಿನ ನಿವೇಶನ / ಜಮೀನಿನ ದರವನ್ನು ರೂ.900/- ಗಳಿಗೆ ನಿಗದಿಪಡಿಸುವಂತೆ ಕೋರಿ ಪ್ರಸ್ತಾವನೆಯನ್ನು ಸಲ್ಲಿಸಿದ್ದು, ವ್ಯವಸ್ಥಾಪಕ ನಿರ್ದೇಶಕರವರು ಸದರಿ ಪ್ರಸ್ತಾವನೆಗೆ ಅನುಮೋದನೆ ನೀಡಿರುತ್ತಾರೆ. ಅದರಂತೆ ಕೆಳಗಿನ ಆದೇಶ.

## ಆ ದೇ ಶ

ಪ್ರಸ್ತಾವನೆಯಲ್ಲಿ ವಿವರಿಸಲ್ಪಟ್ಟಿರುವ ಅಂಶಗಳ ಹಿನ್ನೆಲೆಯಲ್ಲಿ, ವಿಜಯಪುರ ಜಿಲ್ಲೆಯಲ್ಲಿ ನಿಗಮದಿಂದ ಸ್ಥಾಪಿಸಲ್ಪಟ್ಟಿರುವ ಕೈಗಾರಿಕಾ ವಸಾಹತು, ಸಿಂಧಗಿಯಲ್ಲಿನ ನಿವೇಶನಗಳ ಹಂಚಿಕೆಗಾಗಿ ಈ ಹಿಂದೆ ಹಂಚಿಕೆ ಪತ್ರಿಕಾ ಪ್ರಕಟಣೆಯಲ್ಲಿ ಪ್ರಸ್ತಾವಿಸಲಾಗಿದ್ದ ನಿವೇಶನ / ಜಮೀನಿನ ತಾತ್ಕಾಲಿಕ ದರ ಪ್ರತಿ ಚದರ ಮೀಟರ್ ಒಂದಕ್ಕೆ ರೂ.900/-ಗಳನ್ನೇ ಅಂಗೀಕರಿಸಿ, ಅದರಂತೆ **ಸಿಂಧಗಿ ಕೈಗಾರಿಕಾ ವಸಾಹತುವಿನಲ್ಲಿನ ನಿವೇಶನ / ಜಮೀನಿನ ದರವನ್ನು ಪ್ರತಿ ಚದರ ಮೀಟರ್ ಒಂದಕ್ಕೆ ರೂ.900/- (ರೂಪಾಯಿ ಒಂಭತ್ತು ನೂರು ಮಾತ್ರ) ಗಳಿಗೆ ನಿಗದಿಪಡಿಸಲಾಗಿದೆ.** ಉಳಿದಂತೆ, ಇನ್ನಾವುದೇ ರೀತಿಯ ಬದಲಾವಣೆಗಳು ಇರುವುದಿಲ್ಲ.

ಸದರಿ ಆದೇಶವು ತಕ್ಷಣದಿಂದ ಹಾಗೂ ಮುಂದಿನ ಆದೇಶ ಹೊರಡಿಸುವವರೆಗೂ ಜಾರಿಯಲ್ಲಿರುತ್ತದೆ.

/8/16

ಪ್ರಧಾನ ವ್ಯವಸ್ಥಾಪಕರು(ಕೈವ&ಹಣಕಾಸು)

ಗೆ,

1) ಸಹಾಯಕ ಪ್ರಧಾನ ವ್ಯವಸ್ಥಾಪಕರು(ಕೈವ)/(ವ&ಕಾಲೆ), ಕರಾಸಕೈಅನಿನಿ, ಬೆಂಗಳೂರು / ಬೆಳಗಾವಿ, ಇವರ ಮಾಹಿತಿಗಾಗಿ ಹಾಗೂ ಅವಶ್ಯ ಕ್ರಮಗಳಿಗಾಗಿ.
2) ಉಪ ಪ್ರಧಾನ ವ್ಯವಸ್ಥಾಪಕರು(ಕೈವ)ವ-2/(ಹಣಕಾಸು), ಕರಾಸಕೈಅನಿನಿ, ~~ಬೆಂಗಳೂರು~~ ಹುಬ್ಬಳ್ಳಿ ಇವರ ಮಾಹಿತಿಗಾಗಿ ಹಾಗೂ ಅವಶ್ಯ ಕ್ರಮಗಳಿಗಾಗಿ.

ಪ್ರತಿ:

1) ವ್ಯವಸ್ಥಾಪಕ ನಿರ್ದೇಶಕರು, ಕರಾಸಕೈಅನಿನಿ, ಬೆಂಗಳೂರು ಬೆಂಗಳೂರು ಇವರ ಅಮೂಲ್ಯ ಮಾಹಿತಿಗಾಗಿ ಸಲ್ಲಿಸಲಾಗಿದೆ.
2) ಪ್ರಧಾನ ವ್ಯವಸ್ಥಾಪಕರು(ಆಡಳಿತ&ಭೂಸ್ವಾಧೀನ)/(ವಾಣಿಜ್ಯ), ಕರಾಸಕೈಅನಿನಿ, ಬೆಂಗಳೂರು ಇವರ ಮಾಹಿತಿಗಾಗಿ.
3) ಉಪ ಪ್ರಧಾನ ವ್ಯವಸ್ಥಾಪಕರು(ಆ.ಲೆ.ಪ), ಕರಾಸಕೈಅನಿನಿ, ಬೆಂಗಳೂರು ಇವರ ಮಾಹಿತಿಗಾಗಿ
4) ಅಧ್ಯಕ್ಷರವರ ಆಪ್ತ ಸಹಾಯಕರು, ಕರಾಸಕೈಅನಿನಿ, ಬೆಂಗಳೂರು ಇವರ ಮಾಹಿತಿಗಾಗಿ
5) ಉಪಾಧ್ಯಕ್ಷರವರ ಆಪ್ತ ಸಹಾಯಕರು, ಕರಾಸಕೈಅನಿನಿ, ಬೆಂಗಳೂರು, ಇವರ ಮಾಹಿತಿಗಾಗಿ.
6) ವ್ಯವಸ್ಥಾಪಕರು(ಗಣಕಯಂತ್ರ), ಕರಾಸಕೈಅನಿನಿ, ಬೆಂಗಳೂರು ಇವರ ಮಾಹಿತಿಗಾಗಿ ಮತ್ತು ನಿಗಮದ ವೆಬ್‌ಸೈಟ್‌ನಲ್ಲಿ ಅಡಕಗೊಳಿಸಲು.